## 12

# ಸಂಕಷ್ಟದ ಸಮಯದಲ್ಲಿ ನಂಬಿಗಸ್ತರಾಗಿರುವದು

## (2 ಥೆಸಲೊನೀಕ 1:1-12)

ಮೊದಲ ಸಲ ಕ್ರೈಸ್ತರಾದ ನಿಮ್ಮ ಅನುಭವವನ್ನು ನೆನಪು ಮಾಡಿಕೊಳ್ಳಿರಿ. ಅದು ಇಷ್ಟ ಪಡುವಂತದ್ದು ಆಶ್ಚರ್ಯವಾದದ್ದು, ಕೃತಜ್ಞತೆಯುಳ್ಳದ್ದು, ಮತ್ತು ಸಹೋದರರನ್ನು ಪ್ರೀತಿಸುವಂತದ್ದು, ಕ್ರೈಸ್ತರನ್ನು ಪ್ರೀತಿಸುವದು ಆ ದಿನದ ಮತ್ತು ಆ ಗಳಿಗೆಯ ಮುಖ್ಯಭಾಗವಾಗಿತ್ತು. ಅದು ಆನಂದದಾಯಕವಾದ ಆಶೀರ್ವಾದವಾಗಿತ್ತು. ಅದು ನಮ್ಮ ಹೊಸ ಜೀವಿತವನ್ನು ಮುಂದುವರಿಸಲು ಬಲವಾದ ಸ್ಪೂರ್ತಿಯನ್ನು ನೀಡಿತು.

ಬಹುಶಃ ನಮ್ಮನ್ನು ಇತರರು ಯಾವ ರೀತಿಯಲ್ಲಿ ನಡಿಸಿಕೊಳ್ಳುವವರೆಂದು ಚಿಂತಿಸಿ, ಮತ್ತು ಅವರಲ್ಲಿ ಕೆಲವರು ತಿರಸ್ಕಾರವನ್ನು ಮತ್ತು ನಿಂದನೆಯನ್ನು ಅನುಭವಿಸಿರಬಹುದು. ಈ ನಕರಾತ್ಮಕವಾದ ಪರಿಣಾಮಗಳು ತರುವಂತ ಅಧೈರ್ಯವನ್ನು ನಾವು ಎದುರಿಸಲೇಬೇಕು. ತಮ್ಮ ಜೀವಿತವನ್ನು ಕ್ರಿಸ್ತನಿಗೆ ಸಮರ್ಪಿಸಿಕೊಂಡಿರುವ ಕೆಲವರು ಇದೇ ವಿಧವಾದ ಹಿಂಸೆಯನ್ನು ಹೊಂದಿರಬಹುದು.

"ಬಹಳ ಹಿಂಸೆಗಳಲ್ಲಿಯೂ," "ಬಹಳ ವಿರೋಧಗಳು," ಮತ್ತು "ಸಂಕಟಗಳು" ಮೆಕೆದೋನ್ಯದಲ್ಲಿದ್ದ ಥೆಸಲೊನೀಕದ ಹೊಸ ಕ್ರೈಸ್ತರ ಅನುಭವದ ಒಂದು ಭಾಗವಾಗಿತ್ತು. ಏಕೆ? ಯಾಕಂದರೆ ಅವರು ತಮ್ಮ ಪಟ್ಟಣದಲ್ಲಿ ವ್ಯತ್ಯಾಸವುಳ್ಳ ಜೀವಿತವನ್ನು ಜೀವಿಸುತ್ತಿದ್ದರು. ಈಗ ಈ ಕ್ರೈಸ್ತರ ಮನೆಗಳಲ್ಲಿ ವಿಗ್ರಹಗಳಿರಲಿಲ್ಲ. ಅನ್ಯ ದೇವತೆಗಳ ಪೂಜಾರಿಗಳಿಂದ ಯಾವುದೇ ವಿಧವಾದ ಸಲಹೆ ಸೂಚನೆಯನ್ನು ಪಡೆಯುತ್ತಿರಲಿಲ್ಲ. ಅವರುಗಳು ದೇವಾಲಯದ ಯಜ್ಞಗಳಲ್ಲಿಯೂ ಮತ್ತು ಮೆರವಣಿಗೆಗಳಲ್ಲೂ ಪಾಲುತೆಗೆದು ಕೊಳ್ಳುತ್ತಿರಲಿಲ್ಲ ಬಹುಶಃ ಅವರ ನೆರೆಹೊರೆಯವರು ಮತ್ತು ಅವರ ಸಂಬಂಧಿಗಳು ಅವರ ಕ್ರೈಸ್ತ ನಂಬಿಕೆಯನ್ನು ಹಾಳು ಮಾಡುವದಕ್ಕಾಗಿ ಮತ್ತು ಅವರ ಸಂಬಂಧಗಳನ್ನು ಕೆಡಿಸುವದಕ್ಕಾಗಿ, ಅವರ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನಿಷೇದಪಡಿಸಿದ್ದರು - ದೈಹಿಕವಾದ ಹಿಂಸೆಯನ್ನು ನೀಡಿದ್ದರು. ಕ್ರೈಸ್ತ ಸ್ವತಂತ್ರವು ಈ ಹೊಸ ಶಿಷ್ಯರನ್ನು ಸಮಾಜದಿಂದ ಬೇರ್ಪಡಿಸತ್ತು - ಅವರನ್ನು ಪರದೇಶಿಗಳು, ಗುಲಾಮರು, ಅಥವಾ ಕುಷ್ಟ ರೋಗಿಗಳೆಂದು ಆ ಸಮಾಜದವರು ಪರಿಗಣಿಸಿದ್ದರು.

ನೀವು ಕ್ರೈಸ್ತರಾದ ಕಾರಣ ನಿರಾಕರಿಸಲ್ಪಟ್ಟಿದ್ದೀರೋ? ಒಬ್ಬಂಟಿಗರಾಗಿದ್ದೀರೋ? ಹೀನಸ್ಥಿತಿಗೆ ತಳ್ಳಲ್ಪಟ್ಟಿದ್ದೀರೋ? ಅಥವಾ ದೇವರ ಮಾರ್ಗದಲ್ಲಿ ನಡೆಯುತ್ತಿರುವದರಿಂದ ನಿಂದನೆಗೆ ಒಳಗಾಗಿರುವಿರಾ? ಇಂಥ ಹಿಂಸೆಗೆ ಒಳಪಟ್ಟವರನ್ನು ಸಹಾಯಿಸಲು ಪ್ರಯತ್ನಿಸಿರುವಿರಾ ನೀವು ಕ್ರೈಸ್ತರಾಗಲು ಮನಸ್ಸು ಮಾಡಿದ್ದರೂ ತಿರಸ್ಕಾರ ಹೊಂದಬಹುದೆಂಬ ಆಲೋಚನೆಯನ್ನು ಹೊಂದಿರುವಿರಾ.

ಈ ಪರಿಸ್ಥಿತಿಯಲ್ಲಿರುವ ಜನರಿಗೆ ದೇವರು ಯಾವ ವಿಧವಾದ ಉತ್ತೇಜನಕಾರಿಯಾದ ಸಹಾಯವನ್ನು ನೀಡುವನು? 2 ಥೆಸಲೊನೀಕ ಪತ್ರಿಕೆಯು ನಿಮಗೆ ಈ ಕುರಿತು ಸಹಾಯವನ್ನು ಮಾಡುತ್ತದೆ. ಹಿಂಸೆಗೆ ಒಳಗಾಗಿರುವ ಕ್ರೈಸ್ತರ ಸಂಗಡ ದೇವರು ತನ್ನ ಜ್ಞಾನವನ್ನು ಹಂಚಿಕೊಂಡಿದ್ದಾನೆ. ದೇವರು ನಿನ್ನಲ್ಲಿ ನಡಿಸುವ ಈ ಪ್ರಮುಖವಾದ ಸತ್ಯಗಳನ್ನು ನೀನು ಕಲಿಯುವದಾದರೆ, ನಿನ್ನ ಪರಿಸ್ಥಿತಿಗಳ ನಡುವೆ ಬಲವಾದ ಉತ್ತೇಜನ ಉಂಟಾಗುತ್ತದೆ.

## ದೇವರು ನಿನ್ನನ್ನು ತನ್ನ ಮಗುವೆಂದು ಪರಿಗಣಿಸುವನು (1:1-4)

ದೇವರು ತನ್ನ ಮಕ್ಕಳನ್ನು ಗೌರವಿಸಿ ಮತ್ತು ಅವರಲ್ಲಿರುವ ಕ್ರೈಸ್ತ ಸದ್ಗುಣಗಳನ್ನು ಸನ್ಮಾನಿಸುವನೆಂದು ಒತ್ತಿ ಹೇಳಲಾಗಿದೆ. ಯಾರು ತಮ್ಮ ನೆರೆಹೊರೆಯವರ ಕೃಪೆಗೆ ಪಾತ್ರರಾಗಿ ರಲಿಲ್ಲವೋ ಮತ್ತು ವಿರೋಧಿಗಳೆಂದು ಪರಿಗಣಿಸಲ್ಪಟ್ಟಿದ್ದರೋ, ಅಂತವರಿಗೆ ದೇವರು ಮತ್ತು ಯೇಸು "ಕೃಪೆ" ಮತ್ತು "ಸಮಾಧಾನವನ್ನು" ನೀಡಿದರು. ಅವರ ಪರಲೋಕದ ತಂದೆಯು ಮತ್ತು ಅವರ ರಕ್ಷಕನು ಅವರ ಸ್ಥಿತಿಯನ್ನು ಅರ್ಥೈಯಿಸಿಕೊಂಡು ಅವರಿಗಾಗಿ ಚಿಂತಿಸಿದರು. ಅವರ ಬೋಧಕರುಗಳ ವಂದನೆಗಳು ಅವರ ಪ್ರೀತಿಯನ್ನು ಪ್ರತಿಬಿಂಬಿಸುತ್ತವೆ.

ತೊಂದರೆಗೆ ಒಳಗಾಗದವರು ದೇವರು ನೀಡುವ ಪ್ರೀತಿ ಮತ್ತು ಚಿಂತನೆಯ ಕುರಿತು ಅರಿತುಕೊಳ್ಳಬೇಕು. ವಂದನೆಗಳಲ್ಲಿ ಅವರ ಸಹೋದರರು ಇದನ್ನು ಪುನರಾವರ್ತಿಸಿ: "ದೇವರು ನಿಮ್ಮನ್ನು ಪ್ರೀತಿಸುವನು" "ದೇವರು ನಿಮ್ಮನ್ನು ಮೆಚ್ಚುವನು. ದೇವರು ಉತ್ತಮ ವಾದದ್ದನ್ನೇ ನೀಡುವನು. ತಂದೆ ಮತ್ತು ಮಗನು ನಿಮ್ಮಲ್ಲಿ ಆಸಕ್ತಿ ಹೊಂದಿರುವರು." ಈ ವಿಧವಾಗಿ ಸಂಕಷ್ಟದಲ್ಲಿರುವವರನ್ನು ಸಹೋದರ ಸಹೋದರಿಯರು ಪ್ರೋತ್ಸಾಹಿಸಬಹುದು. ಉತ್ತೇಜನ ನೀಡುವ ಸಹಾಯದ ಮಾತುಗಳನ್ನು ನಾವು ಹೇಳಬಹುದು. ಇವುಗಳನ್ನು ಕೇಳಿ ಅರಿತುಕೊಳ್ಳುವಾಗ *ನಮಗೂ* ಸಹ ದೇವರ ಪ್ರೀತಿಯು ಇರುತ್ತದೆ!

ಸಂಕಷ್ಟದಲ್ಲಿರುವ ಸದ್ಗುಣಗಳನ್ನು ದೇವರು ಗೌರವಿಸುವನು ಎಂಬ ಭರವಸವಿರ ಬೇಕು. ಪ್ರೀತಿ ಮತ್ತು ನಂಬಿಗಸ್ತಿಕೆಯು ವಿಶೇಷ ಸದ್ಗುಣಗಳಾಗಿದ್ದು, ಆಸ್ತಿ ಮತ್ತು ದೈಹಿಕ ಜೀವಿತ ಕ್ಕಿಂತಲೂ ಅತ್ಯುತ್ತಮವಾಗಿರುತ್ತದೆ. ಪ್ರೀತಿ ಮತ್ತು ನಂಬಿಕೆಯಲ್ಲಿ ವೃದ್ಧಿಯಾಗುವಾಗ ದೈವ ಭಕ್ತಿಇಲ್ಲದವರು ನೀಡುವ ನಿಂದನೆಯನ್ನು ಕಷ್ಟಗಳನ್ನು ಸಹಿಸುವದಕ್ಕೆ ಅವು ಸಹಾಯಿಸುತ್ತವೆ. ಸಂದಿಗ್ಧ ಪರಿಸ್ಥಿತಿಗಳಲ್ಲಿ ದೈವ ಭಕ್ತಿಯ ಜೀವಿತವನ್ನು ಜೀವಿಸಲು ಇವು ಆಸರೆಯಾಗಿವೆ.

ಹಿಂಸೆಗೊಳಗಾದ ಕ್ರೈಸ್ತರ ಪ್ರೀತಿಯ ಕ್ರಿಯೆಗಳನ್ನು, ದೀರ್ಘಶಾಂತಿಯನ್ನು, ನಂಬಿಗಸ್ತಿಕೆಯನ್ನು ದೇವರು ಮೆಚ್ಚಿರುವನು ಎಂದು ಸಹೋದರರು ಅವರಿಗೆ ಮನದಟ್ಟು ಮಾಡಬೇಕು. ನಾವು ಅವರ ಜೊತೆಯವರಾಗಿರುವದರಿಂದ ದೇವರು ಅವರನ್ನು ಮೆಚ್ಚಿಕೊಂಡಂತೆ, ನಾವೂ ಸಹ ಅವರನ್ನು ಮೆಚ್ಚಿಕೊಳ್ಳಬೇಕು: "ನಿಮ್ಮ ನಂಬಿಕೆ ಹಾಗೂ ನಂಬಿಗಸ್ತಿಕೆಗಾಗಿ ನಾವು ಕೃತಜ್ಞರು ಎಂದು ಹೇಳಬೇಕು. ನಮ್ಮೊಂದಿಗೆ ನೀವು ಹಂಚಿಕೊಂಡಿರುವ ಪ್ರೀತಿಯನ್ನು ಮೆಚ್ಚಿದ್ದೇವೆ. ದೇವರು ನಿಮ್ಮ ಸಂಕಷ್ಟವನ್ನು ತಿಳಿದು, ನೀವು ಹೇಳಿರುವಂತ, ಹಾಗೂ ಮಾಡಿರುವಂತ, ಸಕಲ ಸುಕೃತ್ಯಗಳನ್ನು ಉತ್ತಮವೆಂದು ಪರಿಗಣಿಸುವನು." ಹೀಗೆ ನಾವು ಸಂಕಷ್ಟದಲ್ಲಿ ಸಹನೆಯಿಂದಿರುವವರನ್ನು ಪ್ರೋತ್ಸಾಹಿಸು ವಾಗ, ನಾವು ದೇವರ ಮನಸ್ಸನ್ನೇ ಪ್ರತಿಬಿಂಬಿಸುತ್ತೇವೆ.

## ನಿಮ್ಮ ಹಿಂಸಕರಿಗೆ ದೇವರೇ ಮುಯ್ಯಿತೀರಿಸುವನು (1:5-10)

ಹಿಂಸೆಗೆ ಒಳಗಾದವರು, "ಯೋಬನು ಹಾಗೇ ಗೊಂದಲಕ್ಕೊಳಗಾಗಿ, ನೀತಿ ವಂತರು ಹಿಂಸೆಗೆ ಒಳಗಾಗಿ, ಅನೀತಿವಂತರು ಸಮೃದ್ಧಿ ಹೊಂದುವದು ಏಕೆ ಎಂದು ಪ್ರಶ್ನೆಯನ್ನು ಕೇಳಬಹುದು?" (ಯೋಬ 21:7-16). ದಾವೀದನು ಸಹ ಅನೀತಿಯ ಕುರಿತು ಪ್ರಶ್ನೆಯನ್ನು ಹೊಂದಿದ್ದನು (ಕೀರ್ತನೆ 73:16). ಈ ದಿನಗಳಲ್ಲಿ ಕ್ರೈಸ್ತರು ಸಹ ಈ ಪ್ರಶ್ನೆಯನ್ನು ಹೊಂದಿರುವರು. ಅನ್ಯಾಯವು ದೇವರನ್ನು ಮತ್ತು ಇತರರನ್ನು ತಿರಸ್ಕರಿಸುತ್ತದೆ! ಆದುದರಿಂದ ಈ ವಿಷಯವನ್ನು ಪರಿಶೀಲಿಸಬೇಕು.

ಈ ವಿಷಯದಲ್ಲಿ ದೇವರ ದೃಷ್ಟಿಕೋನವನ್ನು ನೋಡುವುದಾದರೆ, ಅಧ್ಯಾಯ 1ರಲ್ಲಿ ಎರಡು ಸತ್ಯಗಳು ದೃಢಪಟ್ಟಿರುತ್ತವೆ. ಮೊದಲನೆಯದಾಗಿ, ದೇವರು ಹಿಂಸಿಸುವವರನ್ನು ಶಿಕ್ಷಿಸುತ್ತಾನೆ ಎಂದು ದೃಢಪಡಿಸಿಕೊಳ್ಳಬೇಕು. ಆತನು ನೀತಿಯನ್ನು ಸಾಧಿಸುವನು ದೇವರ ಮಾರ್ಗವನ್ನು ಅವಲಂಭಿಸದವರು ಶಿಕ್ಷೆಗೆ ಪಾತ್ರರಾಗುವರು, ಎನ್ನುವಂತದ್ದು ದೇವ ಜನರ

ಹಿಂಸಕರಿಗೂ ಇದು ನಿಶ್ಚಯವಾಗಿ ಅನ್ವಹಿಸುತ್ತದೆ.

ಮಾನಸಾಂತರ ಹೊಂದದ ಹಿಂಸಕರನ್ನು ದೇವರು ತೀರ್ಪು ಮಾಡುವನು. ದೇವರು ಒದಗಿಸುವ ಸಕಲ ದೈಹಿಕ ಹಾಗೂ ಆತ್ಮಿಕ ಆಶೀರ್ವಾದಗಳನ್ನು ಅವರು ಕಳಕೊಳ್ಳುವರು. ದೇವರು ಅವರನ್ನು ಪ್ರತ್ಯೇಕಿಸಿ ಶಿಕ್ಷಿಸಲು ಶಕ್ತಿಯನ್ನು ಹೊಂದಿರುವನು. ಅವರು ಆತನನ್ನು ತಿರಸ್ಕರಿಸಿರುವದರಿಂದ, ಆತನ ಆಶೀರ್ವಾದಗಳಲ್ಲಿ ಒಂದನ್ನೂ ಹೊಂದದೆ, ನಿತ್ಯವಾಗಿರುವರು. ಇದನ್ನೇ ಅವರು ಆಯ್ಕೆಮಾಡಿರುವರು. ಒಬ್ಬನೇ ರಕ್ಷಕನಾದ ಯೇಸುವನ್ನು ತಿರಸ್ಕಾರ ಮಾಡಿರುವದರಿಂದ, ಅವರು ಆತನ ರಕ್ಷಣೆಯನ್ನು ನಿರ್ಲಕ್ಷಮಾಡಿರುವರು (ಅಪೋಸ್ತಲರಕೃತ್ಯಗಳು 4:12), ಆದುದರಿಂದ ಅವರು ದೇವರ ಕ್ಷಮಾದಾನವನ್ನು ಹೊಂದದೆ, ದೇವರನ್ನು ಮತ್ತು ಆತನ ಆಶೀರ್ವಾದವನ್ನು ನಿರಾಕರಿಸಿರುವರು.

ಎರಡನೆಯದಾಗಿ, ಸಂಕಷ್ಟದಲ್ಲಿರುವವರಿಗೆ ದೇವರು ವಿಶ್ರಾಂತಿಯನು ನೀಡುವನು ಎಂದು ದೃಢವಾಗಿರಿ ನಂಬಿರಿ. ಅವರನ್ನು ಜನರು ಸರಿಯಾಗಿ ನಡೆಸಿಕೊಳ್ಳದೆ ಇರುವದರಿಂದ, ದೇವರು ನಿಶ್ಚಯವಾಗಿ ವಿಶ್ರಾಂತಿಯನ್ನು ನೀಡುವನು, ಅವರಿಗೆ ಹಿಂಸಕರು ಶಿಕ್ಷೆಯನ್ನು ಹೊಂದುವದು ನಿಶ್ಚಯ. ಹಿಂಸಕರನ್ನು ದೇವರು ತನ್ನ ಆಶೀರ್ವಾದದಿಂದ ದೂರವಿಟ್ಟು, ತನ್ನ ಮಕ್ಕಳನ್ನು ನಿರಂತರವಾಗಿ ಆಶೀರ್ವದಿಸಲು ಶಕ್ತಿಯನ್ನು ನೀಡುವನು. ಆತನಲ್ಲಿ ಭರವಸವಿಡುವವರು, ಆತನ ರಕ್ಷಣೆಯನ್ನು ಹೊಂದಿ, ಪಾಪದ ಫಲಿತಾಂಶದಿಂದ ಪಾರಾಗಿ ನಿತ್ಯತ್ವವನ್ನು ಹೊಂದುವರು! ಇಂದಿನಿಂದ ಆತನ ಸಂತೈಸುವಿಕೆಗೆ ಮತ್ತು ಪೋಷಣೆಗೆ ಪಾತ್ರರಾಗಿದ್ದು, ಸಮಯದ ಅಂತ್ಯಕ್ಕೆ ಒಳಗಾಗುವದಿಲ್ಲ! ಹಿಂಸೆ ಹೊಂದಿದವರು ಆತನಲ್ಲಿ ಭರವಸವಿಡುವಾಗ ಎಂಥಾ ಆಶ್ಚರ್ಯದ ಬಿಡುಗಡೆ!

## ದೇವರು ತನ್ನ ಸೇವೆಗಾಗಿ ನಿಮ್ಮನ್ನು ಸಿದ್ಧಪಡಿಸುವನು (1:11, 12)

ಹಿಂಸೆಗೆ ಒಳಗಾದವರು, ದೇವರ ಸಹಾಯದಿಂದ ಅವರ ಜೀವಿತವನ್ನು ಸಾರ್ಥಕಪಡಿಸಿಕೊಳ್ಳುವರು! ದೇವರಿಗಾಗಿ ಮೀಸಲಾಗಿರುವದು ಒಂದು ಅವಕಾಶ ಎಂದು ತಿಳುಕೊಳ್ಳಬೇಕು. ನಾವು ಆತನಲ್ಲಿರುವಂತೆ ದೇವರೇ ಸಹಾಹಿಸುವನು! ನಮ್ಮ ಪ್ರತಿನಿತ್ಯದ ಜೀವನದಲ್ಲಿ ಶುಭ ಹಾಗೂ ನಂಬಿಗಸ್ತಿಕೆಯನ್ನು ತೋರ್ಪಡಿಸಿ, ಸೇವೆ ಮಾಡಲು ದೇವರು ಸಕಲ ಅಗತ್ಯತೆಗಳನ್ನು ಒದಗಿಸುವನು. ಕ್ರೈಸ್ತರು ಶಕ್ತಿಯನ್ನು ಹೊಂದಿರುವರು - ಆ ಶಕ್ತಿ ದೇವರದೇ ಹಿಂಸೆಗೆ ಒಳಗಾದವರು! ಈ ಶಕ್ತಿಯನ್ನು ದಿನೇ ದಿನೇ ಪ್ರಕಟಿಸಬೇಕು, ಇದಕ್ಕೆ ದೇವರೇ ಸಹಾಯಿಸುವನು.

ನಾವು ದೇವರ ಸೇವಕರಾಗಿರುವದರಿಂದ ನಮಗೆ ರಕ್ಷಣೆಯಾಯಿತು ಎಂದು ಭಾವಿಸಬಾರದು; ನಾವು ರಕ್ಷಿಸಲ್ಪಟ್ಟಿರುವದರಿಂದ ಆತನ ಸೇವಕರಾಗಿರುವೆವು. ಆತನ ಕೃಪೆಯು ನೀಡುವ ಆಶೀರ್ವಾದಗಳಿಗಾಗಿ ಕೃತಜ್ಞರಾಗಿರಬೇಕು. ನಮ್ಮ ಜೀವಿತದಲ್ಲಿ ಆತನ ಕೃತ್ಯಗಳನ್ನು ದೇವರ ಮಾರ್ಗದಲ್ಲೇ ಬಳಸಬೇಕು. ಪೌಲನು ಎಫೆಸದವರಿಗೆ ತಿಳಿಸಿ, ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. "ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ. ನಾವು ಆತನ ನಿರ್ಮಾಣ; ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" (ಎಫೆಸ 2:8-10). ಆದರೆ "ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" (ಮತ್ತಾಯ 5:16).

ಪರಿಣಾಮವೇನಾಗಿರುತ್ತದೆ? ಜನರು ನಮ್ಮಲ್ಲಿ ಯೇಸುವನ್ನು ನೋಡುವರು. ಕ್ರೈಸ್ತರು

ಹಿಂಸೆಗೆ ಒಳಗಾದಂತ ಸಮಯದಲ್ಲಿ ಜೀವಿಸುವ ದೈವ ಭಕ್ತಿಯ ಜೀವಿತದಲ್ಲಿ ಯೇಸುವಿನ ವರ್ತನೆಯನ್ನು ದೇವರು ನೋಡಿ ತಾನು ಅದೇ ರೀತಿಯಾಗಿ ವರ್ತಿಸುವನು. ಇದು ಯೇಸುವಿಗೆ ಘನ ಮತ್ತು ಮಹಿಮೆಯನ್ನು ತರುತ್ತದೆ.

## ಮುಕ್ತಾಯ

ಕ್ರೈಸ್ತ ಜೀವಿತವು ಪುನರಾವರ್ತನೆಯ ಜೀವಿತವಾಗಿರುತ್ತದೆ. ಸೈತಾನನಿಗೆ ಸೇವೆ ಮಾಡುವಂತ ಒಬ್ಬ ವ್ಯಕ್ತಿಯು ವಿಧೇಯತೆಯ ಮುಖಾಂತರ ದೇವರ ಕಡೆಗೆ ತಿರುಗಿಕೊಂಡರೆ, ಕ್ಷಮಾಪಣೆಯನ್ನು ಹೊಂದುವನು. ಯೇಸುವಿನ ಪುನರಾಗಮನವು ಸಹ ದೊಡ್ಡ ಪುನರಾವರ್ತನೆಯನ್ನು ಉಂಟುಮಾಡುತ್ತದೆ. ನಿಶ್ಚಿಂತತೆಯಿರುವವರು ಸಂಕಟಕ್ಕೆ ಒಳಗಾಗುವರು. ಸಂಕಟದಲ್ಲಿರುವವರು ಸಂತೈಸುವಿಕೆಯನ್ನು ಹೊಂದುವರು. ದೇವರಿಗಾಗಿ ಜೀವಿಸಿದವರು ಮಾತ್ರ ಯೋಗ್ಯವಾದ ಜೀವಿತವನ್ನು ಜೀವಿಸಿದರೆಂದು ತೋರ್ಪಡಿಸಲಾಗುತ್ತದೆ.

ಸಂಕಟದಲ್ಲಿರುವ ದೇವಜನರಿಗೆ ಇದು ವಿಶೇಷವಾದ ಸಂದೇಶವಾಗಿರುತ್ತದೆ! ಯೇಸುವನ್ನು ಅನುಸರಿಸಿದ್ದರಿಂದ ಜನರು ನಿಮ್ಮನ್ನು ಸರಿಯಾಗಿ ನಡೆಸಿಕೊಳ್ಳದೆ ಹೋದರೆ, ಅದು ನಿಮಗೆ ಮಾನವೇ. ಅದು ನಿಮಗೆ ಪದಕಗಳಿಗಿಂತಲೂ, ಯೋಗ್ಯತಾ ಪತ್ರಗಳಿಗಿಂತಲೂ, ಅರ್ಹತಾ ಪತ್ರಗಳಿಗಿಂತಲೂ, ಮತ್ತು ನೆನಪಿನ ಕಾಣಿಕೆಗಳಿಗಿಂತಲೂ, ನಮ್ಮ ಹೆಸರನ್ನು ಮುದ್ರಣಮಾಡಿ ಬೆಳಕಿನಲ್ಲಿ ತೋರ್ಪಡಿಸುವದಕ್ಕಿಂತಲೂ ಯೋಗ್ಯವಾದದ್ದಾಗಿರುತ್ತದೆ. ವಿಶ್ವದ ಒಡೆಯನ ಗೌರವ ಮತ್ತು ಮಹಿಮೆಯಲ್ಲಿ ಪಾತ್ರಧಾರಿಗಳಾಗುತ್ತವೆ!

ನೀವು ಯೋಗ್ಯರಾಗಿದ್ದರೂ ಕಷ್ಟಗಳನ್ನು ಅನುಭವಿಸುವುದಾದರೆ, ದೇವರೆ ನಿಮ್ಮನ್ನು ಸಂತೈಸುವನು. ಅನ್ಯಾಯವಾಗಿ ಹಿಂಸೆಯನ್ನು ಹೊಂದುವವರಿಗೆ ನೀವು ಸಹಾಯಿಸಲು ಪ್ರಯತ್ನಿಸುವಾಗ, ಇದೇ ಸಂತೈಸುವಿಕೆಯನ್ನು ನೀವು ಸಹ ಅವರೊಂದಿಗೆ ಹಂಚಿಕೊಳ್ಳಬಹುದು. ಕೆಟ್ಟ ಸಂದರ್ಭಗಳಲ್ಲಿಯೂ, ನಿಮಗೆ ನಿತ್ಯತ್ವದ ಗೌರವವಿದೆಯೆಂದು ತಿಳಿದು, ಈಗ ಪ್ರಯೋಜನಕಾರಿಯಾದ ಜೀವಿತವನ್ನು ಜೀವಿಸಬಹುದು!